**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ</u>**
**<u>ಸಿ.ಸಿ.832/2022</u>**

| | | |
|---|---|---|
| ಸಾಕ್ಷಿದಾರರ ಹೆಸರು | : ದಯಾಕರ್ | ಡಿಡಬ್ಲ್ಯೂ.1 |
| ತಂದೆಯ ಹೆಸರು | : ಅಣ್ಣೇಗೌಡ | |
| ವಯಸ್ಸು | : 37 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ವ್ಯವಸಾಯ | ದಿನಾಂಕಃ20.06.2025 |
| ವಾಸಸ್ಥಳ | : ಸಾಲುಮರ,ಗೋಣೇಬೀಡು. | |

**<u>:ಮುಖ್ಯ ವಿಚಾರಣೆಃಶ್ರೀ ಕೆ.ಆರ್.ಹೆಚ್. ವಕೀಲರಿಂದ:</u>**

ಪಿರ್ಯಾದಿಯ ಪರಿಚಯ ನನಗಿದೆ. ಅವರು ನಮ್ಮ ಊರುಮನೆಯವರು.

2020 ರಲ್ಲಿ ನಾನು ಮತ್ತು ಪಿರ್ಯಾದಿಯು ಪಾರ್ನರ್ ಆಗಿ ನನ್ನ ಗದ್ದೆಯಲ್ಲಿ ಶುಂಠಿ ಬೆಳೆದಿದ್ದೆವು. ಮಳೆ ಜಾಸ್ತಿಯಾಗಿ ಸರಿಯಾಗಿ ಬೆಳೆ ಬಂದಿರಲಿಲ್ಲ. ಬಂದ ಪಸಲಿನ ಮಾರಾಟದ ಬಾಬ್ತು ಬಂದ ರೂ.1,50,000/- ಹಣದ ಪೈಕಿ ರೂ.50,000/- ವನ್ನು ಖರ್ಚಿಗೆಂದು ಹಿಡಿದುಕೊಂಡು ಉಳಿದ ರೂ.1,00,000/- ಹಣವನ್ನು ನನ್ನ ತಮ್ಮ ಸಂದೀಪ್ ರವರ ಮೂಲಕ ಪಿರ್ಯಾದಿಯ ಖಾತೆಗೆ ವರ್ಗಾಯಿಸಿದ್ದೇನೆ. ನಾವು ಬೆಳೆ ಬೆಳೆಯುವ ಸಮಯಕ್ಕೆ ಪಿರ್ಯಾದಿ ನನ್ನಿಂದ ಭದ್ರತೆಗೆಂದು ಕರ್ನಾಟಕ ಬ್ಯಾಂಕ್, ಗೋಣೀಬೀಡು ಶಾಖೆಯ ನನ್ನ ಖಾತೆಗೆ ಸಂಬಂಧಪಟ್ಟ ಎರಡು ಖಾಲಿ ಚೆಕ್ ಗಳನ್ನು ಪಡೆದಿದ್ದರು. ಪಿರ್ಯಾದಿಗೆ ಹಣ ಜಮೆ ಮಾಡಿದ ನಂತರ ಚೆಕ್ ಗಳನ್ನು ವಾಪಸ್ಸು ಕೇಳಲು ಹೋದಾಗ ಚೆಕ್ ಗಳು ಕಳೆದುಹೋಗಿದೆ ಎಂದು ಹೇಳಿದರು. ಆನಂತರ ಪಿರ್ಯಾದಿ ನನಗೆ ತರುವೆಯ ಚೌಡೇಶ್ವರಿ ದೇವಸ್ಥಾನದಿಂದ ನೋಟೀಸು ಕಳುಹಿಸಿದ್ದಾರೆ. ಆ ನೋಟೀಸಿನಲ್ಲಿ ಶುಂಠಿ ಬೆಳೆಯ ಬಾಬ್ತು ಹಣ ಕೊಡಬೇಕು ಎಂದು ತಿಳಿಸಿರುತ್ತಾರೆ. ಪಿರ್ಯಾದಿಯ ಮಗ ಪೂರ್ಣೇಶ್ ರವರಿಗೂ ನನಗೂ ಯಾವುದೇ ಸಂಬಂಧ ಇಲ್ಲ. ಆದರೆ ಅವರೂ ಸಹಾ ನನ್ನ ಒಂದು ಚೆಕ್ ನ್ನು ಸಲ್ಲಿಸಿ ಸುಳ್ಳು ಪ್ರಕರಣ ದಾಖಲಿಸಿದ್ದಾರೆ. ಪಿರ್ಯಾದಿಗೆ ನಾನು ಕೊಡಬೇಕಿದ್ದ ಹಣವನ್ನು ಕೊಟ್ಟಿದ್ದೇನೆ. ಆದರೂ ಸಹಾ ನನ್ನ ಒಂದು ಚೆಕ್ ನ್ನು ಹಾಜರುಪಡಿಸಿ ಈ ಸುಳ್ಳು ಪ್ರಕರಣ ದಾಖಲಿಸಿದ್ದಾರೆ.

ಸಾಕ್ಷಿಯು ನಿಪಿ-1 ನ್ನು ನೋಡಿ ಅದೇ ಚೆಕ್ ನ್ನು ಮೇಲೆ ಹೇಳಿದಂತೆ ಪಿರ್ಯಾದಿಗೆ ಕೊಟ್ಟಿದ್ದೆ ಎಂದು ಗುರುತಿಸಿರುತ್ತಾರೆ. ನಿಪಿ-1(ಎ) ಸಹಿ ನನ್ನದೇ. ಸಾಕ್ಷಿಯು ಕರ್ನಾಟಕ ಬ್ಯಾಂಕ್ ನ ಒಂದು ಪಾಸ್ ಬುಕ್ ನಲ್ಲಿನ ದಿ.27.04.2021 ರ ವಿವರ, ಚೌಡೇಶ್ವರಿ ಅಮ್ಮನವರ ದೇವಸ್ಥಾನ, ತರುವೆ ರವರಿಂದ ಕಳುಹಿಸಲಾಗಿರುವ ನೋಟೀಸು ಮತ್ತು ಅಂಚೆ ಲಕೋಟೆಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಡಿ-1 ರಿಂದ 3 ಎಂದು ಗುರುತಿಸಲಾಯಿತು.

ಆದ್ದರಿಂದ ಪಿರ್ಯಾದನ್ನು ವಜಾ ಮಾಡಿ ನನ್ನನ್ನು ಬಿಡುಗಡೆ ಮಾಡಬೇಕಾಗಿ ಕೋರುತ್ತೇನೆ.

**<u>ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.